# ಮದುವೆಯಾಗಿ ಆರು ತಿಂಗಳಿಲ್ಲ ಮತ್ತೆ ಬಣ್ಣ ಒಲಿದು ಬಂದಿದೆ!



**ಅನು ಅಯ್ಯಪ್ಪ**
ಉದಯದ 'ನಂದಿನಿ'ಯ ದೇವಯಾನಿ

**◆ ಪಾತ್ರದ ಹೊಣೆ ಪಲ್ಲಟವಾಗಿದೆ ಅದರ ಸವಾಲುಗಳನ್ನು ಹೇಗೆ ತೆಗೆದುಕೊಳ್ಳುತ್ತೀರಿ?**

ಈ ಪಾತ್ರಕ್ಕೆ ಜನವರಿ ತಿಂಗಳಲ್ಲೇ ನನಗೆ ಕರೆ ಬಂದಿತ್ತು. ಆಗ ನನ್ನ ಮದುವೆಗೆ ಐದಾರು ದಿವಸ ಬಾಕಿ ಉಳಿದಿತ್ತು. ಅವತ್ತು ನಾನು ಊರಿಗೆ ಹೋಗುವ ತರಾತುರಿಯಲ್ಲಿದ್ದೆ. ಮತ್ತೆ ಆ ವಿಷಯದ ಚರ್ಚೆಗೆ ಹೋಗಲೇ ಇಲ್ಲ. ಆ ಪಾತ್ರ ನನ್ನನ್ನೇ ಅರಸಿ ಬಂದಿದೆ. ಆಗಸ್ಟ್ 5ರಿಂದ ದೇವಯಾನಿಯಾಗಿ ಕಾಣಿಸಿಕೊಳ್ಳುತ್ತಿದ್ದೇನೆ. ಆರಂಭದಲ್ಲಿ ಈ ಪಾತ್ರದ ಬಗ್ಗೆ ಭಯ ಇತ್ತು. ಈ ಕತೆಯನ್ನು ಕೇಳಿದಾಗ ತುಂಬ ಇಷ್ಟ ಆಗಿತ್ತು. ಒಳ್ಳೆಯ ಪಾತ್ರ ಎನ್ನುವ ಸ್ವಯಂ ಮೆಚ್ಚುಗೆ ಕೂಡ ಮೂಡಿತ್ತು. ಭಯ ಏಕೆಂದರೆ, ಇದಕ್ಕಿಂತ ಮುಂಚೆ 'ಮುದ್ದು ಲಕ್ಷ್ಮಿ'ಯಲ್ಲಿ ನೆಗೆಟಿವ್ ಪಾತ್ರ ಮಾಡ್ತಿದ್ದೆ. 'ಅಗ್ನಿಸಾಕ್ಷಿ' ಕೊನೆಯಲ್ಲಿ ಎರಡು ತಿಂಗಳು ಮಾಡಿದೆ. ಅದು ಸಂಕೀರ್ಣ ಪಾತ್ರ. ಒಮ್ಮೆ ನೆಗೆಟಿವ್ ಪಾತ್ರಕ್ಕೆ ಒಗ್ಗಿದರೆ ಅದಕ್ಕೇ ಬ್ರ್ಯಾಂಡ್ ಮಾಡುವ ಸಂದರ್ಭವೇ ಹೆಚ್ಚು. ಇಂತಹ ಪಾಸಿಟಿವ್ ಪಾತ್ರವನ್ನು ನಾನು ನಿರ್ವಹಿಸಿದರೆ ಹೇಗೆ ತೆಗೆದುಕೊಳ್ಳುತ್ತಾರೆ ಎನ್ನುವ ಕಾರಣ. ನನ್ನಲ್ಲಿ ಇರುವ ಕಲೆಯನ್ನು ಸಾಧಿಸಿ ತೋರಿಸುವ ಹುಮ್ಮಸ್ಸಿನಲ್ಲಿ ಪಾತ್ರಕ್ಕೆ ತಯಾರಾದೆ. ಮಾಡಲು ಆಗುತ್ತದೆಯೋ ಇಲ್ಲವೋ ಎನ್ನುವ ಗೊಂದಲ ಮಾತ್ರ ಇತ್ತು. ಮೊದಲ ದಿನವೇ ನನ್ನ ಗೊಂದಲ ಮಾಯವಾಯಿತು. ತಂಡದ ಸಹಕಾರ ಅದನ್ನೆಲ್ಲಾ ಹುಸಿಗೊಳಿಸಿತು. ನಿಧಾನಕ್ಕೆ ಅದರೊಳಗೆ ಹೊಕ್ಕ ನಾನು ಕೆಲವೇ ದಿನಗಳಲ್ಲಿ ಅದರ ಭಾಗವಾಗಿದ್ದೇನೆ.

**◆ ನಿಮ್ಮ ಕಂಠ ಭಿನ್ನವಾಗಿದೆ ಅದನ್ನೇ ಕಲೆಗೆ ಪಾಲಿಶ್ ಮಾಡುವ ಯೋಚನೆ ಇಲ್ಲವಾ?**

ನನ್ನ ದನಿ ಗೊರಗಲಾಗಿದೆ. ಸಿನಿಮಾದಲ್ಲಿ ನನ್ನ ದನಿ ಡಬ್ಬಿಂಗ್ ಮಾಡಲಿಲ್ಲ. ಕಂಠದಾನ ಕಲಾವಿದೆಯಾಗುವ ಬಗ್ಗೆ ನಾನು ಯೋಚನೆ ಮಾಡಲಿಲ್ಲ. ಈ ಕ್ಷೇತ್ರಕ್ಕೆ ಬಂದ ಆರಂಭದಲ್ಲಿ ನನ್ನ ಕನ್ನಡ ಉಚ್ಚರಣೆ ಗ್ರಾಂಥಿಕ ಸ್ವರೂಪದಲ್ಲಿ ಇರಲಿಲ್ಲ. ಕೊಡಗಿನ ಪ್ರಾದೇಶಿಕತೆ ನನ್ನ ನುಡಿಯಲ್ಲಿ ಹೆಚ್ಚು ಇಣುಕುತ್ತಿತ್ತು. ಸಿನಿಮಾದಲ್ಲಿ ನನ್ನ ಪಾತ್ರಕ್ಕೆ ಬೇರೆಯವರು ಕಂಠದಾನ ಮಾಡಿದ್ದಾರೆ ಸುವರ್ಣದ 'ಮುದ್ದುಲಕ್ಷ್ಮಿ' ಲೈವ್ ರೆಕಾರ್ಡ್ ಇತ್ತು ಹಾಗಾಗಿ ಅದು ಸಮಸ್ಯೆಯೇ ಆಗಲಿಲ್ಲ. ಇಲ್ಲಿ ನನ್ನ ದನಿಯನ್ನು ಡಬ್ ಮಾಡಲಾಗುತ್ತಿದೆ. ಈಗ ನನ್ನ ಭಾಷೆಗೆ ಪಾಲಿಶ್ ಬಂದಿದೆ.

**◆ ನಟಿಯೇ ಏಕೆ ಆಗಿದ್ದು ಎಂದು ಕೇಳಿದರೆ...**

ನಟನೆ ನನ್ನ ಪ್ಯಾಶನ್. ನಾನು ಏಳನೇ ತರಗತಿಯಲ್ಲಿ ಓದುವಾಗಲೇ ಈ ರೀತಿಯ ಆಸೆಯಿತ್ತು. ಅದು ಯಾರದೋ ಪ್ರಭಾವದಿಂದ ಬಂದಿರಲಿಲ್ಲ. ನಟಿಯಾಗುವ ಮಾರ್ಗದ ಹಾದಿ ಮಾತ್ರ ತಿಳಿದಿರಲಿಲ್ಲ. ಪದವಿ ಮುಗಿಸಿದ ನಂತರ ಬೆಂಗಳೂರಿಗೆ ಕೆಲಸಕ್ಕೆಂದು ಬಂದೆ. ಐಬಿಎಂ ಕಂಪನಿಯ ಎಚ್‌ಆರ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೆ. ವೈಯಕ್ತಿಕ ಕಾರಣಕ್ಕೆ ಆರೇ ತಿಂಗಳಿಗೆ ಕೆಲಸವನ್ನು ಬಿಟ್ಟೆ. ಮತ್ತೊಂದು ಕೆಲಸ ಹುಡುಕಬೇಕಿತ್ತು. ಅಷ್ಟರೊಳಗೆ ನಾನೊಂದು ಫೋಟೊ ಶೂಟಿಂಗ್ ಮಾಡಿಸಿದ್ದೆ. ಚಿತ್ರರಂಗ ಪ್ರವೇಶ ಮಾಡಲು ಹಿಂದೇಟು ಹಾಕುತ್ತಿದ್ದೆ. ತುಂಬ ದೊಡ್ಡ ಉದ್ಯಮ ನನ್ನಂತವರು ಎಷ್ಟೋ ಮಂದಿ ಎನ್ನುವ ಮನೋಭಾವ ಮನೆ ಮಾಡಿತ್ತು. ಆದರೆ ಹೇಗೋ ಒಂದು ಸಿನಿಮಾಕ್ಕೆ ಸಿಕ್ಕ ಅವಕಾಶ ನನ್ನ ಆಲೋಚನೆಯನ್ನೂ ಬದಲಿಸಿತು. ನನ್ನ ಕನಸಿನ ವೃತ್ತಿಗೂ ಮಾರ್ಗವಾಯಿತು.

ಮೊದಲ ಸಿನಿಮಾಕ್ಕೆ ಆಡಿಷನ್ ಓಕೆ ಆಯಿತು. ವಿದೇಶದಲ್ಲಿ ಶೂಟ್ ಮುಗಿಸಿಕೊಂಡು ಬಂದೆ. ಅದನ್ನು ಮುಂದುವರಿಸಲು ಸಾಧ್ಯ ಆಗಲಿಲ್ಲ. ನಂತರ 'ಕರ್ವ' 'ಕಥಾ ವಿಚಿತ್ರ', 'ಲೈಫ್ ಸೂಪರ್', 'ಪಾನಿಪೂರಿ' ಮಾಡಿದೆ. ತಮಿಳಿನಲ್ಲಿ 'ಅಂಜಲಿ ಪುತ್ರ' ಮಾಡಿದೆ ತೆಲುಗಿನಲ್ಲೂ ಒಂದು ಸಿನಿಮಾ ಮಾಡಿದೆ. ನಂತರ ಮಾಡೆಲಿಂಗ್ ಸಿಕ್ಕಾಪಟ್ಟೆ ಮಾಡಿದೆ. ಆಗಲೂ ಅನೇಕ ಸಿನಿಮಾಗಳಿಗೆ ಅವಕಾಶ ಬರುತ್ತಿದ್ದವು.

**◆ ಹಲವು ಬಗೆಯ ಅಭಿರುಚಿ ಇರುವ ನೀವು ಯಾವ ಐಡೆಂಟಿಟಿ ಬಯಸುತ್ತೀರಿ?**

ಬಣ್ಣದ ಜಗತ್ತು ಪರಿಚಯ ಆಗಿದ್ದೇ ಸಿನಿಮಾ ಮೂಲಕ. ಈಗ ಅದು ಮಾಡಬೇಕು, ಇದು ಮಾಡಬಾರದು ಎಂದೇನೂ ಇಲ್ಲ. ಸಿನಿಮಾ–ಧಾರಾವಾಹಿ ಎರಡರಲ್ಲೂ ನಟಿಸಲು ಸಿದ್ಧ. ಪಾತ್ರ ಎಂದರೆ ಕಥೆಯಲ್ಲಿ ಬಂದು ಹೋಗುವಂತೆ ಇರಬಾರದು ಅದಕ್ಕೊಂದು ಅನನ್ಯತೆ ಇರಬೇಕು. ಮದುವೆ ಆಗಿ ಕೆಲವೇ ತಿಂಗಳು ಆಗಿವೆ. ಮದುವೆ ನೆಪದಲ್ಲಿ ನಾಲ್ಕಾರು ತಿಂಗಳು ಬ್ರೇಕ್ ತೆಗೆದುಕೊಂಡು ಈಗ ಬರ್ತಾ ಇದ್ದೀನಿ. ನನ್ನ ಕುಟುಂಬದ ಬೆಂಬಲ ಕೂಡ ಇದೆ. ಇದೇ ವೃತ್ತಿಯನ್ನು ತೆಗೆದುಕೊಳ್ಳುತ್ತೇನೆ. ಎಂತಹ ಕಠಿಣ ಪಾತ್ರವಾದರೂ ಅದನ್ನು ನಿಭಾಯಿಸಲು ಸಿದ್ಧ.

■ **ರಾಘವೇಂದ್ರ ಕೆ.**